O.S. ನಂಬರಃ 23/2018-1/2018

ಪಿ. ಡಬ್ಲ್ಯೂಃ 1

ದಿಃ 21-08-2023 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

ಮುಂದುವರೆದ ಪಾಟಿ ಸವಾಲುಃ ಪ್ರತಿವಾದಿಯ ಪರ ವಕೀಲರಾದ ಶ್ರೀ ಬಿ.ಎನ್.ಆರ್ ರವರರಿಂದಃ

ನಾನು ಕೋಲಾರದಿಂದ ವರ್ಗಾವಣೆಯಾಗಿ ಮೇ 1995 ರಲ್ಲಿ ಬಂದಿರುತ್ತೇನೆ. ನಾನು ಬಂದಾಗ ನನ್ನ ತಂದೆಯವರು ಜೀವಂತ ಇದ್ದರು. ನಾನು ಆಗ ದಿಃ26-05-1995 ರಲ್ಲಿ ನಾಡುಮಾಸ್ಕೇರಿ ಶಾಲೆಯಲ್ಲಿ ಕೆಲಸ ಮಾಡುತ್ತಿದ್ದೆ. ಅಲ್ಲಿಂದ ಉಗ್ರಗೋಣಕ್ಕೆ ವರ್ಗಾವಣೆಯಾಗಿ ಹೋಗಿರುತ್ತೇನೆ. ನಾನು ಮೊದಲು ಪೊಲೀಸರಿಗೆ ಫಿರ್ಯಾದಿಯನ್ನು ಕೊಟ್ಟ ನಂತರ ಮೂಲ ದಾವೆಯನ್ನು ದಾಖಲಿಸಿರುತ್ತೇನೆ. ಸಾಕ್ಷಿಗೆ ಅವರು ಕೊಟ್ಟ ಫಿರ್ಯಾದಿಯನ್ನು ತೋರಿಸಲಾಗಿ ವಾದಪತ್ರದಲ್ಲಿ ನಮೂದು ಮಾಡಿದ 50-60 ಜನರು ಗುಂಡಾಗಳು ಬಂದಿದ್ದರು ಎನ್ನುವ ವಿಷಯವನ್ನು ನೀವು ನಿಮ್ಮ ಪಿರ್ಯಾದಿಯಲ್ಲಿ ಬರೆಸಿದ್ದೀರಾ ಎಂದು ಕೇಳಿದ್ದಕ್ಕೆ ಸಾಕ್ಷಿಯು 8-10 ಜನರ ಹೆಸರುಗಳನ್ನು ನಮೂದು ಮಾಡಿರುತ್ತೇನೆ ಎಂದು ನುಡಿಯುತ್ತಾರೆ. ಸಾಕ್ಷಿಗೆ ತೋರಿಸಿದ ಫಿರ್ಯಾದಿಯ ಪ್ರತಿಯನ್ನು ನಿಡಿ-1 ಎಂದು ಗುರುತಿಸಲಾಯಿತು. 7 ಜನರ ವಿರುದ್ಧ ಪ್ರಥಮ ವರ್ತಮಾನ ವರದಿಯನ್ನು ದಾಖಲಿಸಿಕೊಂಡಿರುತ್ತಾರೆ. 8-10 ಜನರ ವಿರುದ್ಧ ಕ್ರಮವನ್ನು ತೆಗೆದುಕೊಂಡಿರುತ್ತಾರೆ. ಸದರಿ ವಿಚಾರವಾಗಿ ನ್ಯಾಯಾಲಯದಲ್ಲಿ ಪ್ರಕರಣ ನಡೆಯುತ್ತಿದ್ದು, ಆದರೆ ನನಗೆ ಮಾಹಿತಿ ಇರುವುದಿಲ್ಲ. ಸದರಿ ಪ್ರಕರಣವು ವಿಚಾರಣೆಯಾಗಿ ಆರೋಪಿತರು ನಿರ್ದೋಷಿತರು ಎಂದು ತೀರ್ಮಾಣಿಸಿ ನಿಖಾಲೆಯಾಗಿರುತ್ತದೆ ಎಂದರೆ ಸರಿಯಲ್ಲ. 50-60 ಜನರ ಹೆಸರನ್ನು ನಮೂದು ಮಾಡಿರುವುದಿಲ್ಲ ಎಂದರೆ ಸರಿ.

2. ಎಜುಕೇಶನ್ ಕಮಿಷನರ್ ಇವರ ಮುಂದೆ ಮೇಲ್ಮನವಿ ಸಲ್ಲಿಸಿರುತ್ತೇನೆ ಎಂದರೆ ಸರಿ. ಸದರಿ ಮೇಲ್ಮನವಿಯ ಪ್ರತಿಯನ್ನು ನಿಡಿ-2 ಎಂದು ಗುರುತಿಸಲಾಯಿತು. ಅದರಲ್ಲಿ ಬರೆದಿರುವ ವಿಷಯಗಳು ಸರಿ ಇರುತ್ತವೆ. ದಿಃ10-02-2018 ಕ್ಕಿಂತ ಮೊದಲು ಜಾಗಕ್ಕೆ ಭೇಟಿ ಕೊಟ್ಟಿದ್ದೀರಾ ಎಂದು ಕೇಳಿದ್ದಕ್ಕೆ ಸಾಕ್ಷಿಯು 4 ದಿನಗಳ ಮುಂಚೆ ಹೋಗಿದ್ದು, ಅದರ ಹಿಂದಿನ ವಾರವು ಸಹ ಹೋಗುತ್ತೇನೆ ಎಂದು ನುಡಿಯುತ್ತಾರೆ. ನನ್ನ ತಂದೆಯವರು ಶಾಲೆಯನ್ನು ಕಟ್ಟಿರುತ್ತಾರೆ ಎಂದರೆ ಸರಿ. ನಿಮ್ಮ ತಂದೆಯವರು ಕಟ್ಟಿಸಿದ ಶಾಲೆಯನ್ನು ನೀವು ದಿನಾಲು ನೋಡುತ್ತಾ ಹೋಗುತ್ತೀರಾ ಎಂದು ಕೇಳಿದ್ದಕ್ಕೆ ಸಾಕ್ಷಿಯು ನನ್ನ ತಂದೆಯವರು 2 ಕೋಣೆಗಳನ್ನು ಕಟ್ಟಿಸಿದ್ದು, ಅದರಲ್ಲಿ ಮಾವು ಹಾಗೂ ಗೇರು ಗಿಡಗಳನ್ನು ಸಂಗ್ರಹಿಸಿಟ್ಟಿರುತ್ತಾರೆ ಎಂದು ನುಡಿಯುತ್ತಾರೆ. ಇದರ ಬಗ್ಗೆ ನನ್ನ ವಾದಪತ್ರದಲ್ಲಿ ಬರೆದಿರುವ ಬಗ್ಗೆ ನನಗೆ ಗೊತ್ತಿರುವುದಿಲ್ಲ. ವಾದ ಪತ್ರದಲ್ಲಿ ದಾವಾ ಜಮೀನಿನಲ್ಲಿ ಏನು ಇದೆ ಎಂದು ನಮೂದು ಮಾಡಿದ್ದು ನನಗೆ ಗೊತ್ತಿರುವುದಿಲ್ಲ. ತೀವ್ರವಾಗಿ ಮಳೆ ಬಂದಿದ್ದರಿಂದ ಗಂಜಿ ಕೇಂದ್ರವನ್ನು ಸ್ಥಾಪನೆ ಮಾಡಿರುತ್ತಾರೆ ಎಂದರೆ ಸಾಕ್ಷಿಯು 2018 ರಲ್ಲಿ ಕಟ್ಟಿಸಿದ್ದು ಎಂದು ನುಡಿಯುತ್ತಾರೆ. ನಂತರ ಬಲವಂತವಾಗಿ ಮಾಡಿರುತ್ತಾರೆ ಎಂದು ಹೇಳುತ್ತಾರೆ.

<u>ಮುಂದುವರೆದ ಪಾಟೀ ಸವಾಲನ್ನು ವಿನಂತಿ ಮೇರೆಗೆ ಮುಂದೂಡಲಾಯಿತು.</u>

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸರಿ ಇದೆ.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು, ಅಂಕೋಲಾ.